# ವಚನ ಕ್ರಾಂತಿ ಮತ್ತು ನಾಟಕ ಸಾಹಿತ್ಯ

**ಪ್ರಹ್ಲಾದ ಕೆ.**

ಸಹಾಯಕ ಪ್ರಾಧ್ಯಾಪಕರು, ಶ್ರೀ ಎಸ್.ಆರ್. ಕಂಠಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುಧೋಳ.

**DOI: https://doi.org/10.5281/zenodo.17258057**

## ABSTRACT:

ಕನ್ನಡ ನಾಟಕ ಸಾಹಿತ್ಯವು ಪ್ರಾಚೀನ ಕಾಲದಲ್ಲಿ ಜನರ ನಂಬಿಕೆ, ಆಚರಣೆ ಮತ್ತು ಸಂಪ್ರದಾಯದ ಪ್ರದರ್ಶನವಾಗಿದ್ದರೆ, ಆಧುನಿಕ ಕಾಲದಲ್ಲಿ ಅದು ಸ್ವತಂತ್ರ ಕಲೆಯ ರೂಪವನ್ನು ಪಡೆದಿದೆ. 'ಮಿತ್ರವಿಂದ ಗೋವಿಂದ' ನಾಟಕದಿಂದ ಆರಂಭವಾಗಿ, ಸಂಸ್ಕೃತ ಮತ್ತು ಗ್ರೀಕ್ ರಂಗಭೂಮಿಯ ಪ್ರಭಾವದಲ್ಲಿ ಕನ್ನಡ ನಾಟಕವು ತನ್ನ ಪೂರ್ಣ ಸ್ವರೂಪವನ್ನು ತಲುಪಿತು. ಮೈಸೂರು ಒಡೆಯರ ಕಾಲದಿಂದ ಪ್ರಾರಂಭಗೊಂಡ ಆಧುನಿಕ ಕನ್ನಡ ನಾಟಕ ಪರಂಪರೆಯಲ್ಲಿ ಶಾಕುಂತಲಾ ನಾಟಕ ನಾಂದಿ ಹಾಡಿತು. ಶರಣರ ವಚನ ಚಳುವಳಿ 12ನೇ ಶತಮಾನದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂದೇಶಗಳನ್ನು ಒಳಗೊಂಡಿದ್ದು, ಆಧುನಿಕ ನಾಟಕಕಾರರು ಈ ಚಳುವಳಿಯ ಅಂಶಗಳನ್ನು ಸಮಕಾಲೀನ ಸನ್ನಿವೇಶಗಳಿಗೆ ಹೊಂದಿಕೊಂಡು ನಾಟಕಗಳನ್ನು ರಚಿಸುತ್ತಿದ್ದಾರೆ. ಪಿ. ಲಂಕೇಶರ 'ಸಂಕ್ರಾಂತಿ', ಗಿರೀಶ್ ಕಾರ್ನಾಡರ 'ತಲೆದಂಡ', ಹೆಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ', ಚಂದ್ರಶೇಖರ್ ಕಂಬಾರ ಅವರ 'ಶಿವರಾತ್ರಿ', ಡಾ. ನಟರಾಜ್ ಬೂದಾಳ್, ಡಾ. ವಿಕ್ರಂ ವಿಸಾಜಿ ಅವರ ನಾಟಕಗಳು ವಚನ ಕ್ರಾಂತಿಯ ಪರಂಪರೆಯನ್ನು ನವೀಕೃತವಾಗಿ ಸಮಕಾಲೀನ ದೃಷ್ಟಿಕೋನದಲ್ಲಿ ಪ್ರದರ್ಶಿಸುತ್ತವೆ. ಈ ನಾಟಕಗಳು ಶರಣರ ತತ್ತ್ವಗಳನ್ನು ಸಾಮಾಜಿಕ ನ್ಯಾಯ, ಜಾತಿ ಸಮಾನತೆ ಮತ್ತು ಮಾನವೀಯ ಮೌಲ್ಯಗಳ ಪ್ರಚಾರಕ್ಕೆ ಉಪಯೋಗಿಸುತ್ತವೆ.

## KEYWORDS:

ಕನ್ನಡ ನಾಟಕ, ಆಧುನಿಕ ನಾಟಕ ಪರಂಪರೆ, ವಚನ ಚಳುವಳಿ, ಶರಣರು, ಸಾಮಾಜಿಕ ನ್ಯಾಯ, ಜಾತಿ ಸಮಾನತೆ.

ಕನ್ನಡದ ನಾಟಕ ಸಾಹಿತ್ಯವು ಆರಂಭದಲ್ಲಿ ಜನರ ನಂಬಿಕೆ, ಸಂಪ್ರದಾಯ, ಆಚರಣೆಯ ಪ್ರದರ್ಶನವಾಗಿದ್ದಿತು. ಅದು ವೇಷಭೂಷಣ, ನೃತ್ಯ, ಭಾವ, ಶಿಲ್ಪ, ಸಂಗೀತದ ಮೂಲಕ ತನ್ನ ಭಾವನೆಗಳನ್ನು ಅಭಿವ್ಯಕ್ತಿ ಮಾಡುವುದಕ್ಕೆ ಶುರು ಮಾಡಿದಾಗ ಅದು ರಂಗಭೂಮಿಯ ಕಲ್ಪನೆಯನ್ನು ಗುರುತಿಸಿಕೊಂಡಿತು. ತದನಂತರ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ನಾಟಕೀಯದ ಚಹರೆ ಕಾಣಿಸಿಕೊಂಡಿರುವುದು ಕಾಣಬಹುದು. ಮುಂದೆ ಆಧುನಿಕ ಕಾಲಘಟ್ಟದಲ್ಲಿ ಕನ್ನಡದ ರಂಗಭೂಮಿ ಮತ್ತು ನಾಟಕ ಸಾಹಿತ್ಯವು ಒಂದು ಪ್ರತ್ಯೇಕ ಶಿಸ್ತಾಗಿ ಬೆಳೆಯಿತು. ಸಂಸ್ಕೃತ ರಂಗಭೂಮಿಯ ಮಾದರಿಯಲ್ಲಿ ಕನ್ನಡ ನಾಟಕದ ಪೂರ್ಣ ಸ್ವರೂಪವನ್ನು ಹದಿನಾರನೇ ಶತಮಾನದ ಉತ್ತರಾರ್ಧದಲ್ಲಿನ ಸಿಂಗರಾರ್ಯನ 'ಮಿತ್ರವಿಂದ ಗೋವಿಂದ' ನಾಟಕದ ಮೂಲಕ ಗುರುತಿಸಲು ಸಾಧ್ಯವಿದೆ. ಆನಂತರದಲ್ಲಿ ಗ್ರೀಕ್, ಸಂಸ್ಕೃತ ರಂಗಭೂಮಿಯ ಮಾದರಿಯಲ್ಲಿ ಕನ್ನಡದ ರಂಗಭೂಮಿ ಮತ್ತು ನಾಟಕ ಸಾಹಿತ್ಯವು ಒಂದು ಶಿಸ್ತಾಗಿ ಪೂರ್ಣ ಪ್ರಮಾಣದಲ್ಲಿ ರೂಪಗೊಳ್ಳಲು ಸಾಧ್ಯವಾಯಿತು.

ವರ್ತಮಾನದ ಬದುಕಿನ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅಂತರ್ಗತಗೊಳಿಸಿ ಸೃಷ್ಟಿಯಾಗುವ ನಾಟಕ ಸಾಹಿತ್ಯವು, ಸಮಾಜದೊಂದಿಗೆ ಮುಖಾಮುಖಿಯಾಗಿ ಅನುಸಂಧಾನದ ಮೂಲಕ ಸಾಂಸ್ಕೃತಿಕ ಮೌಲ್ಯಗಳನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡುತ್ತದೆ. ಇಂತಹ ಮಹತ್ವದ ಕಾಳಜಿ ಹೊಂದಿರುವ ಕನ್ನಡ ರಂಗಭೂಮಿಯ ಆಧುನಿಕ ಪರಂಪರೆಯನ್ನು ಮೈಸೂರು ಒಡೆಯರ ಕಾಲಾವಧಿಯಿಂದ ಗುರುತಿಸಬೇಕಾಗುತ್ತದೆ. ಕ್ರಿ.ಶ.ಸು. 1882 ರಲ್ಲಿ ಚಾಮರಾಜ ಒಡೆಯರ ಪ್ರೇರಣೆಯಿಂದ ಕೈ.ವಾ. ಬಸವಪ್ಪಶಾಸ್ತ್ರಿಗಳು ಅವರು ಬರೆದಿರುವ 'ಶಾಕುಂತಲಾ' ಆಧುನಿಕ ಕನ್ನಡ ನಾಟಕ ಪರಂಪರೆಗೆ ನಾಂದಿ ಹಾಡಿತು ಎನ್ನಬೇಕು. ಈ ಅವಧಿಯಲ್ಲಿ ಹೆಚ್ಚು ರೂಪಾಂತರ ಹಾಗೂ ಅನುವಾದದ ನಾಟಕಗಳು ಬಂದಿರುವುದನ್ನು ಕಾಣಬಹುದು. ಅಲ್ಲಿಂದ ಒಂದು ಶತಮಾನದ ಕಾಲಾವಧಿಯಲ್ಲಿ ರಂಗಭೂಮಿಯು ಉಜ್ವಲವಾಗಿ ಬೆಳೆಯತೊಡಗಿತು, ಚಲನಚಿತ್ರಗಳ ಕಾಲ ಆರಂಭವಾಗುವವರೆಗೂ ಅದು ಮುಂದುವರೆಯಿತು. ಆನಂತರ ಚಲನಚಿತ್ರ ಉದ್ಯಮದೊಂದಿಗೆ ಸ್ಪರ್ಧಿಗಿಳಿದು ತನ್ನ ಆಕರ್ಷಣೆಗೆ ಸ್ವಲ್ಪ ಮಟ್ಟಿನ ದಕ್ಕೆಯನ್ನು ಅನುಭವಿಸಿತು. ಕನ್ನಡ ರಂಗಭೂಮಿ ತನ್ನ ಏನೇ ಏರಿಳಿತಗಳ ಪರಿಣಾಮಕ್ಕೆ ಸಿಲುಕಿದರು ಆಯಾ ಕಾಲಘಟ್ಟದಲ್ಲಿ ನಾಟಕಕಾರರು, ರಂಗಕರ್ಮಿಗಳು ವರ್ತಮಾನಕ್ಕೆ ಅನುಗುಣವಾಗಿ ಬೆಳೆಸುತ್ತಲೇ ಬಂದಿದ್ದಾರೆ. ಜನಪದ, ಪೌರಾಣಿಕ, ಐತಿಹಾಸಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಇನ್ನು ಮುಂತಾದ ಹಲವು ನೆಲೆಗಳಲ್ಲಿ ತನ್ನ ಇರುವಂತಿಕೆಯನ್ನು ಸಾಬೀತು ಮಾಡುತ್ತಲೇ ಬಂದಿದೆ.

ಭಾರತೀಯ ಪರಂಪರೆಯಲ್ಲಿ ಹನ್ನೆರಡನೆಯ ಶತಮಾನದೊತ್ತಿಗೆ

ನೆಲೆಗೊಂಡಿದ್ದ ಶ್ರೇಣೀಕೃತ ವರ್ಣ ವ್ಯವಸ್ಥೆಯು ಈ ನೆಲದ ಜನರನ್ನು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಬದುಕಿನ ನೆಲೆಯಲ್ಲಿ, ಮೂಲಭೂತ ಹಕ್ಕುಗಳಿಂದ ವಂಚಿಸಿ ಎಲ್ಲ ರಂಗಗಳಲ್ಲಿ ತಾರತಮ್ಯವು ತಾಂಡವವಾಡುವ ಕಾಲಘಟ್ಟವಾಗಿ ರೂಪಗೊಂಡಿತು. ಆಗ ವಚನ ತತ್ವದ ಶರಣರು ವೈಚಾರಿಕತೆಯ ತಳಹದಿಯ ಮೇಲೆ ಆಂದೋಲನವನ್ನು ಆರಂಭಿಸಿ, ಸಮಸಮಾಜದ ನಿರ್ಮಾಣಕ್ಕೆ ಬಹುದೊಡ್ಡ ಕ್ರಾಂತಿ ಮಾಡಿರುವುದನ್ನು ಚರಿತ್ರೆ ಸಾರುತ್ತದೆ. ವಚನ ಚಳುವಳಿಯ ಎಲ್ಲ ಭಿನ್ನ ವಿಭಿನ್ನ ನೆಲೆಗಳನ್ನು ಒರೆಗೆ ಹಚ್ಚಿ ನೋಡುವ, ತಮ್ಮ ಗ್ರಹಿಕೆಯ ಮೂಸೆಯಲ್ಲಿಟ್ಟು ಕಟ್ಟಿಕೊಡುವ ಕೆಲಸವನ್ನು ಸಾಹಿತ್ಯ ಮಾಡುತ್ತಾ ಬಂದಿದೆ. ವಚನಕಾರರನ್ನು ಹತ್ತಿರದಿಂದ ಕಂಡ ಹರಿಹರ ರಾಘವಾಂಕರಿದ ಮೊದಲುಗೊಂಡು ಸಮಕಾಲೀನದವರೆಗೂ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ಶರಣರು ವಿನೂತನತೆಗೆ ತೆರೆದುಕೊಳ್ಳುತ್ತಲೇ ಇದ್ದಾರೆ. ಶರಣರ ಕಾಲವನ್ನು ಮರು ರೂಪಿಸುವ ಆ ಮೂಲಕ ಚರಿತ್ರೆಯ ಮರು ನಿರ್ಮಾಣದ ಸಶಕ್ತತೆಯ ಹೆಚ್ಚುಗಾರಿಕೆ ಇರುವುದು ರಂಗಭೂಮಿ ಮತ್ತು ನಾಟಕ ಸಾಹಿತ್ಯದಲ್ಲಿ. ಆಧುನಿಕ ಕನ್ನಡ ನಾಟಕ ಸಾಹಿತ್ಯವು ವಿಶೇಷ ನೆಲೆಗಟ್ಟಿನಲ್ಲಿ ವಚನಕ್ರಾಂತಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಮಾನವ ಬದುಕಿನ ನಿರಂತರತೆಯಲ್ಲಿ ಜೀವನ ಶೈಲಿ ಬದಲಾದಂತೆ ಜೀವನದ ಮೌಲ್ಯಗಳು ಬದಲಾಗುತ್ತವೆ, ಇದರ ಪರಿಣಾಮವಾಗಿ ಆಯಾ ಕಾಲದಲ್ಲಿ ಮೂಡಿಬರುವ ಸಾಹಿತ್ಯವು ಕೂಡ ತನ್ನ ದೃಷ್ಟಿಯನ್ನು ಬದಲಾಯಿಸುತ್ತದೆ. ಯಾವುದೇ ಕಾಲದ ಕಥನವಾದರೂ ಸಮಕಾಲೀನದಲ್ಲಿ ಕವಿಯು ವರ್ತಮಾನದ ಸಾಮಾಜಿಕ ಪ್ರಜ್ಞೆಗೆ ಬಹು ಎಚ್ಚರದಿಂದ ಬಳಸಲು ಪ್ರಯತ್ನಿಸುತ್ತಾನೆ. ಆಗ ಅದು ಒಂದು ಉತ್ತಮ ಕೃತಿಯಾಗಿ ಹೊರಹೊಮ್ಮಬಲ್ಲದು. ಕನ್ನಡದ ನಾಟಕ ಪ್ರಕಾರದಲ್ಲಿ ಹೆಚ್ಚು ಸಮಕಾಲೀನ ಸಂದರ್ಭಗಳು ಮುಖಾಮುಖಿಯಾಗಿರುವದುಂಟು.

ಕನ್ನಡದಲ್ಲಿ ಶರಣರ ಕುರಿತ ನಾಟಕಗಳು ತಕ್ಕಮಟ್ಟಿಗೆ ರಚನೆಗೊಂಡಿವೆಯಾದರೂ ಅವು 19 ನೇ ಶತಮಾನದ ಆರಂಭದಲ್ಲಿ ಕಂಡುಬರುತ್ತವೆ. ಅದು ಹೊಸಗನ್ನಡದ ಸಂದರ್ಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಬಂಡಾರದಲ್ಲಿ ಪ್ರಾರಂಭದ ಐದು ಶರಣರ ನಾಟಕಗಳು ಸಿಕ್ಕಿರುವುದು ವಿದ್ವಾಂಸರು ಗುರುತಿಸುತ್ತಾರೆ. ಅವುಗಳನ್ನು ಡಾ.ಜಯಶ್ರೀ ದಂಡೆ ಹಾಗು ಡಾ.ವೀರಣ್ಣ ದಂಡೆ ಸಂಪಾದಕತ್ವದಲ್ಲಿ 'ಶರಣರ ಹಳೆಯ ನಾಟಕಗಳು' ಹೆಸರಿನ ಗ್ರಂಥದಲ್ಲಿ ಪ್ರಕಟಿಸಲಾಗಿದೆ. 1901 ರಲ್ಲಿ ಸಿದ್ದಪ್ಪ ಕಡಿ ವಿರಚಿದ 'ಘಟ್ಟಿವಾಳಯ್ಯ', 1909 ರಲ್ಲಿ ಅಮರಶಾಸ್ತ್ರಿ ಹಿರೇಮಠ ರಚಿಸಿದ 'ಬಸವೇಶ್ವರ', ಅಲ್ಲದೆ ಲೇಖಕರ ಸುಳಿವು ಇಲ್ಲದ 'ಶ್ರೀ ಬಸವೇಶ್ವರ', 'ಭಕ್ತಿ ಭಂಡಾರಿ ಬಸವಣ್ಣ' ಹಾಗೂ 'ಸಿದ್ಧರಾಮೇಶ್ವರ' ನಾಟಕಗಳು ವಚನ ಕ್ರಾಂತಿಯ ಆಧುನಿಕ ನಾಟಕ ಸಾಹಿತ್ಯಕ್ಕೆ ಆರಂಭ ಕೊಟ್ಟಿರುವುದನ್ನು

ಗುರುತಿಸಬಹುದು.

ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯೆಂದು ಆಧುನಿಕ ನಾಟಕ ಸಾಹಿತ್ಯವು ಟಿಸಿಲೊಡೆದು ನಾಟಕ ಸಾಹಿತ್ಯ ಹಾಗೂ ರಂಗ ಚಟುವಟಿಕೆಗಳು ನಡೆಯಲು ಶುರುವಾದಾಗಲೂ ಕೂಡ ಶರಣರ ಬದುಕಿನ ಮೇಲೆ, ಅವರ ವಚನ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವಂತಹ ನಾಟಕಗಳನ್ನು ರಚಿಸಿ ಪ್ರದರ್ಶನ ಮಾಡಿದ್ದಾರೆ. ಶ್ರೀಕಂಠಶಾಸ್ತ್ರಿ ನಲವಡಿ ಅವರ ಜಗಜ್ಯೋತಿ ಬಸವೇಶ್ವರ, ಏಣಗಿ ಬಳಪ್ಪ ಅವರ ಜಗಜ್ಯೋತಿ ಬಸವೇಶ್ವರ, ಅನಕೃ ಅವರ ಜಗಜ್ಯೋತಿ ಬಸವೇಶ್ವರ, ವೈ.ಎಂ.ಚಂದ್ರಯ್ಯ ಅವರ ಚೋರಬಸವೇಶ್ವರ, ವಿ.ಸಿದ್ಧರಾಮಣ್ಣ ಅವರ ಶಿವಶರಣ ಹರಳಯ್ಯ, ವೀರರಾಗಿಣಿ ಅಕ್ಕಮಹಾದೇವಿ ಹಾಗೂ ವಿಶ್ವಾತ್ಮ ಬಸವಣ್ಣ. ಜೋಳದರಾಶಿ ದೊಡ್ಡನಗೌಡ ಅವರ ಕ್ರಾಂತಿಪುರುಷ ಬಸವಣ್ಣ, ಚಿತ್ತರಗಿ ಗಂಗಾಧರಶಾಸ್ತ್ರಿಗಳ ಬಸವೇಶ್ವರ, ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಅವರ ಬೆಳಕಿನೆಡೆಗೆ, ತೊಟ್ಟಿವಾಡಿಯ ನಂಜುಂಡಸ್ವಾಮಿಯವರ ಮಾದರ ಚೆನ್ನಯ್ಯ, ಡಾ. ಸಿದ್ದಯ್ಯ ಪುರಾಣಿಕರ ಆತ್ಮಾರ್ಪಣೆ, ಡಾ. ಎಚ್. ಜೆ. ಲಕ್ಕಪ್ಪ ಗೌಡರ ಕಾಯಕಯೋಗಿ, ಪುಟ್ಟರಾಜ ಗವಾಯಿಗಳ ಭಗವಾನ್ ಬಸವೇಶ್ವರ, ಡಾ. ಎಚ್.ಎಸ್. ತಿಪ್ಪೆರುದ್ರಸ್ವಾಮಿ ಅವರ ಮೋಳಿಗೆ ಮಾರಯ್ಯ ಹಾಗೂ ಸಕಲೇಶ ಮಾದರಸ, ಎಂ. ಸಿ. ರಾಮಲಿಂಗಯ್ಯನವರ ಕ್ರಾಂತಿಯೋಗಿ ಬಸವಣ್ಣ, ಮುದೇನೂರು ಸಂಗಣ್ಣ ಅವರ ಸೂಳೆ ಸಂಕವ್ವೆ, ಕೆ.ಎಂ. ರೇವಣ್ಣ ಅವರ ಶರಣೆ ಅಕ್ಕನಾಗಮ್ಮ, ರಂ. ಶ್ರೀ. ಮುಗಳಿ ಅವರ ಅಕ್ಕಮಹಾದೇವಿ, ಎಸ್ ಚಿದಾನಂದ ಅವರ ದಿವ್ಯಾಂಬರಿ. ಬೆಳ್ಳಾವೆ ನರಹರಿಶಾಸ್ತ್ರಿಗಳ ಶ್ರೀ ಮಹಾತ್ಮ ಬಸವೇಶ್ವರ, ಸಾ.ಶಿ. ಮರಳಯ್ಯ ಅವರ ಜಗದಣ್ಣ ಬಸವಣ್ಣ, ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ ಮರಣವೇ ಮಹಾನವಮಿ, ಜಿ.ಎಸ್. ಹನ್ನೆರಡುಮಠ ಅವರ ಮಹಾಸಂಗಮ. ಸಿದ್ಧರಾಮ ಕೆ ಅವರ ದಾರಿಯಾವುದಯ್ಯ. ಶಂಕರಾನಂದ ಉಲ್ಲಾಸಕರ ಅವರ ಬಸವಣ್ಣನ್ನು ಬದುಕಿಸಿ. ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಜಂಗಮದೆಡೆಗೆ, ಜಡಭರತರ ನಾನೇ ಬಿಜ್ಜಳ. ಎಂ.ಎಂ. ಕಲಬುರ್ಗಿ ಅವರ ಕೆಟ್ಟಿತ್ತು ಕಲ್ಯಾಣ. ಹೆಚ್.ಎಸ್. ಶಿವಪ್ರಕಾಶ್ ಅವರ ಮಹಾಚೈತ್ರ. ಚಂದ್ರಶೇಖರ್ ಕಂಬಾರ ಅವರ ಶಿವರಾತ್ರಿ ಇನ್ನು ಮುಂತಾದ ನಾಟಕಗಳನ್ನು ಹೆಸರಿಸಬಹುದು.

ಈ ಎಲ್ಲ ನಾಟಕಗಳನ್ನ ಗಮನಿಸಿದಾಗ ಶರಣ ಕಾಲಕ್ಕೆ ಕುರಿತಾಗಿ ರಚನೆಯಾದ ನಾಟಕಗಳಾದರೂ ಕೂಡ, ಅದರಲ್ಲಿ ಶರಣರ ವೈಯಕ್ತಿಕ ಬದುಕಿನ ನೆಲೆಯಲ್ಲಿ ಬೆಳಕು ಚೆಲ್ಲುವ ನಾಟಕಗಳೇ ಹೆಚ್ಚಿವೆ. ಶರಣರ ಜೀವನ ವಿಷಯಗಳನ್ನು ಹೇಳುತ್ತಲೇ ಅವರು ಪ್ರತಿಪಾದಿಸಿದ ತತ್ವಗಳನ್ನು ಮತ್ತು ಆ ತತ್ವಗಳು ಸಾಮಾಜಿಕ ಬದಲಾವಣೆಗೆ ಹೇಗೆ ಸಹಕಾರಿಯಾಗಿವೆ, ಅದರಿಂದ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಮತ್ತು ಸಮಾಜದ

ವಿವಿಧ ವರ್ಗ, ವರ್ಣದ ಜನರ ಸಾಧಕ ಬಾಧಕಗಳಿಗೆ ಸ್ಪಂದಿಸುವಂತಹ ಎಳೆಗಳನ್ನು ಎತ್ತಿಕೊಂಡು ತಮ್ಮ ನಾಟಕದ ವಸ್ತುವನ್ನಾಗಿಸಿ ಹೆಣೆದ ನಾಟಕಗಳು ಕಡಿಮೆಯೆಂದೇ ಹೇಳಬೇಕಾಗುತ್ತದೆ. ವಚನಕ್ರಾಂತಿಯು ವರ್ತಮಾನದ ಜನರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಮತ್ತು ವಚನ ಕ್ರಾಂತಿಯ ಸಂದರ್ಭ ಹಾಗೂ ಸಮಕಾಲೀನ ಸಾಮಾಜಿಕ ಭಿನ್ನ ನೆಲೆಗಳ ಸಂದರ್ಭಕ್ಕೆ ಹೇಗೆ ಸ್ಪಂದನೆ ನೀಡುತ್ತದೆ ಎಂಬ ವಿಚಾರಗಳ ಹಿನ್ನೆಲೆಯಲ್ಲಿ ರಚನೆಗೊಂಡಿರುವಂತಹ ಕೆಲವೇ ಕೆಲವು ನಾಟಕಗಳಿವೆ. ಅವು ಹೆಚ್ಚು ಚರ್ಚೆಗೆ ಗ್ರಾಸವಾಗಿ ವಚನಕ್ರಾಂತಿಯ ತಲಸ್ಪರ್ಶಿಯಾಗಿ ಒಳನೋಟಗಳನ್ನು ಅರ್ಥೈಸುವಿಕೆಯಲ್ಲಿ ಯಶಸ್ವಿಯಾಗಿವೆ. ಪಿ. ಲಂಕೇಶರ ಸಂಕ್ರಾಂತಿ, ಗಿರೀಶ್ ಕಾರ್ನಾಡ್‌ರ ತಲೆದಂಡ, ಹೆಚ್.ಎಸ್ ಶಿವಪ್ರಕಾಶ್ ಅವರ ಮಹಾಚೈತ್ರ ಚಂದ್ರಶೇಖರ್ ಕಂಬಾರ್ ಅವರ ಶಿವರಾತ್ರಿ ಹಾಗೂ ಜಡಭರತರ ನಾನೇ ಬಿಜ್ಜಳ ಇನ್ನು ಮುಂತಾದ ನಾಟಕಗಳನ್ನು ಹೆಸರಿಸಬಹುದು. ಈ ನಾಟಕಗಳು ವರ್ತಮಾನದ ಸಾಮಾಜಿಕ, ರಾಜಕೀಯ, ಧಾರ್ಮಿಕ ಘಟನೆಗಳ ಹಿನ್ನೆಲೆಯಲ್ಲಿ ಭೂತಕಾಲದ ಅಂತಹುದೇ ಘಟನೆಗಳನ್ನು ತಮ್ಮ ಕೃತಿಯಲ್ಲಿ ಅಳವಡಿಸಿ ಆ ಎರಡು ಕಾಲಘಟ್ಟಗಳ ಘರ್ಷಣೆಯಲ್ಲಿ ಹೊಸ ಹೊಸ ಸತ್ಯಗಳನ್ನು ಶೋಧಿಸುವುದು, ಆ ಮೂಲಕ ಎರಡು ನೆಲೆಗಳ ವ್ಯಾಪ್ತಿಯನ್ನು ವಿಸ್ತರಿಸಿ ಒಂದು ಹೊಸ ಅರ್ಥಸಾಧ್ಯತೆಯನ್ನ ಕಂಡುಕೊಳ್ಳುವಿಕೆಗೆ ಈ ನಾಟಕಗಳು ಸಾಕ್ಷಿಯಾಗುತ್ತವೆ.

ಪಿ.ಲಂಕೇಶರ ಸಂಕ್ರಾಂತಿ ನಾಟಕವು ಚರಿತ್ರೆಯ ಚೌಕಟ್ಟಿನಲ್ಲಿ ಸಮಕಾಲೀನ ಸಮಾಜದಲ್ಲಿ ಉಂಟಾದ ಸಮಸ್ಯೆಗಳ ಕುರಿತು ಅನುಸಂಧಾನ ಮಾಡುವ ನಿಟ್ಟಿನಲ್ಲಿ ರೂಪಗೊಂಡಿದೆ. ಶರಣ ಸಂಸ್ಕಾರಕ್ಕೆ ಕೆಲವು ನಿಯಮಗಳನ್ನು ರೂಪಿಸಿ, ಒಂದು ಹೊಸ ಶರಣ ಸಂಸ್ಕೃತಿಯನ್ನು ನಿರ್ಮಿಸಲು ಹೊರಟ ಬಸವಣ್ಣ, ಸಮಾಜದಲ್ಲಿನ ಶೂದ್ರರನ್ನು ಶರಣರನ್ನಾಗಿಸಲು ಮಾಡುವ ಪ್ರಯತ್ನದಲ್ಲಿ ಸಮಾಜದ ವರ್ಗವ್ಯವಸ್ಥೆಯು ಹೇಗೆ ತೊಡಕಾಗಿ ಪರಿಣಮಿಸಿತು, ಅದನ್ನು ಬಸವಣ್ಣ ಎದುರಿಸಿದ ಬಗೆ ಹೇಗೆ ಎನ್ನುವಂತಹ ಸನ್ನಿವೇಶಗಳನ್ನು ನಾಟಕದ ಕಥಾವಸ್ತುವಾಗಿಸಿ ದೃಶ್ಯಗಳ ಮೂಲಕ ಕಟ್ಟಿದ್ದಾರೆ. ನಾಟಕದಲ್ಲಿ ಬರುವ ರುದ್ರನು ಬಸವಣ್ಣರಿಗೆ ಪೂರ್ಣವಾಗಿ ಶರಣಾದವನು. ಅವನು ಬ್ರಾಹ್ಮಣರ ಹುಡುಗಿ ಉಷೆಯನ್ನು ಪ್ರೀತಿಸುತ್ತಿದ್ದಾನೆ ಆಕೆಯು ಕೂಡ ಒರಟು ವ್ಯಕ್ತಿತ್ವದ ರುದ್ರನನ್ನು ಬಯಸುತ್ತಾಳೆ. ಈ ಪ್ರೇಮ ಪ್ರಕರಣದ ಮೂಲಕ 12ನೇ ಶತಮಾನದ ಶರಣ ಕ್ರಾಂತಿಯನ್ನು ಸಮಕಾಲಿನ ಸಂದರ್ಭದಲ್ಲಿ ಇಟ್ಟು ಚರ್ಚಿಸುತ್ತಾರೆ. ಈ ಹಿನ್ನೆಲೆಯಲ್ಲಿ ಜಾತಿ ಪದ್ಧತಿ, ಪ್ರಭುತ್ವ ಪ್ರಭಾವ, ವರ್ಗ ವ್ಯವಸ್ಥೆ ಹಾಗೂ ಸಾಮಾಜಿಕ ಸ್ಥಾನಮಾನಗಳಂತಹ ವಿಷಯಗಳನ್ನು ಚರ್ಚಿಸುತ್ತ, ಸಮಾಜದಲ್ಲಿನ ದೌರ್ಬಲ್ಯಗಳನ್ನು, ಆಳುವವರ ಒಳ ಮರ್ಮಗಳ ಮೇಲೆಯೂ ನಾಟಕ ಬೆಳಕು ಚೆಲ್ಲುತ್ತದೆ. ಹೀಗೆ ವಚನ ಚಳುವಳಿಯ ಭಿನ್ನ ಆಯಾಮಗಳನ್ನು ಸಮಕಾಲಿನದಲ್ಲಿಟ್ಟು ನೋಡುವ ಸಂಕ್ರಾಂತಿ

ನಾಟಕವು ವಚನ ಕ್ರಾಂತಿಯ ಬಗೆಗಿರುವ ವಿಶಿಷ್ಟ ನಾಟಕವಾಗಿದೆ.

ಗಿರೀಶ್ ಕಾರ್ನಾಡರ ತಲೆದಂಡ ನಾಟಕವು ಬ್ರಾಹ್ಮಣ ಪುರುಷ ಶೀಲವಂತ ಹಾಗೂ ತಳಜಾತಿಯ ಮಹಿಳೆ ಕಲಾವತಿಯ ನಡುವಿನ ವಿವಾದಾತ್ಮಕ ಅಂತರ್ಜಾತಿ ವಿವಾಹದ ಸುತ್ತ ರೂಪಿಸಲಾಗಿದೆ. ಈ ವಿಷಯ ಸಮಾಜದ ವರ್ಗವ್ಯವಸ್ಥೆಯ ಪರಿಣಾಮದಿಂದಾಗಿ ಮುಂದೆ ಅದು ಸಂಘರ್ಷಕ್ಕೆ ಬಹುದೊಡ್ಡ ಸ್ವರೂಪ ಪಡೆದುಕೊಳ್ಳುತ್ತದೆ. ಸುಧಾರಣಾವಾದಿ ಮತ್ತು ಸಂಪ್ರದಾಯವಾದಿಗಳ ನಡುವೆ ಹಿಂಸಾತ್ಮಕ ಕ್ರಿಯೆಗೆ ಕಾರಣವಾಗಿ ನವವಿವಾಹಿತರನ್ನು ಕ್ರೂರವಾಗಿ ಗಲ್ಲಿಗೇರಿಸುವುದರ ಮೂಲಕ ದುರಂತಕ್ಕೆ ಕಾರಣವಾಗುತ್ತದೆ. ಕಾರ್ನಾಡರು ಈ ನಾಟಕದಲ್ಲಿ ಸುಧಾರಣಾವಾದಿಗಳ ಶಿರಶ್ಛೇದನದ ಘಟನೆಯು, ಸಮಾಜದ ಸುಧಾರಣಾತ್ಮಕ ವಿಚಾರಗಳ ಛೇದನ ಕೂಡ ಆಗಿರುವಂತೆ ಪ್ರತಿಬಿಂಬಿಸುತ್ತಾರೆ. ಸಾಮಾಜಿಕ ಅಸಮಾನತೆ, ಜಾತಿ ತಾರತಮ್ಯ, ಧಾರ್ಮಿಕ ಮತ್ತು ರಾಜಕೀಯ ಸಂಘರ್ಷಗಳನ್ನು ವ್ಯಕ್ತಿ ಮತ್ತು ಸಾಮಾಜಿಕ ಕೇಂದ್ರಿತವಾದ ವಿಷಯಗಳ ಕಡೆಗೆ ಈ ನಾಟಕವು ಹೆಚ್ಚು ಕೇಂದ್ರೀಕರಿಸುತ್ತದೆ.

ಹೆಚ್.ಎಸ್. ಶಿವಪ್ರಕಾಶ ಅವರ ಮಹಾಚೈತ್ರ ನಾಟಕವು ವಚನ ಕ್ರಾಂತಿಯಾದ ನಂತರ ಬಸವಣ್ಣ ಕಲ್ಯಾಣವನ್ನು ತೊರೆದ ಮೇಲೆ, ಬಸವಣ್ಣನ ಆದರ್ಶ ವಿಚಾರಗಳನ್ನು, ಸಾಮಾಜಿಕ ಚಳುವಳಿಯನ್ನು ಮುಂದುವರಿಸಿಕೊಂಡು ಅವನ ಕನಸುಗಳನ್ನು ನನಸಾಗಿಸುವ ನಿಟ್ಟಿನಲ್ಲಿ ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ, ಬಹುರೂಪಿ ಚೌಡಯ್ಯ ಇನ್ನು ಮುಂತಾದ ಶರಣರು ತೊಡಗುತ್ತಾರೆ. ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಶೋಷಣೆ ಹೋರಾಡುವಾಗ ಪ್ರಭುತ್ವದ ವೈರತ್ವ ಕಟ್ಟಿಕೊಳ್ಳಬೇಕಾಗುತ್ತದೆ. ಅದನ್ನು ಮೆಟ್ಟಿ ನಿಲುವ ಬಗೆಯನ್ನು, ತಳ ಸಮುದಾಯದವರ ಮೇಲೆ ವಚನ ಚಳುವಳಿಯು ಬೀರಿದ ಪರಿಣಾಮವನ್ನು ನಾಟಕ ಧ್ವನಿಸುತ್ತದೆ. ವಚನ ಕ್ರಾಂತಿಯನ್ನು ಹೊಸ ದೃಷ್ಟಿಕೋನದಿಂದ ವಾಸ್ತವಿಕ ನೆಲೆಗಟ್ಟಿಗೆ ತರುವಲ್ಲಿ ಒಂದು ವಿಶಿಷ್ಟ ನಾಟಕವಾಗಿ ಕಂಡುಬರುತ್ತದೆ.

ಚಂದ್ರಶೇಖರ ಕಂಬಾರರ ಶಿವರಾತ್ರಿ ನಾಟಕದಲ್ಲಿ 12ನೇ ಶತಮಾನದ ಶರಣ ಚಳುವಳಿಯನ್ನ ದಲಿತ ಸಮುದಾಯಗಳು ಗ್ರಹಿಸಿದ ಬಗೆಯನ್ನು, ಬಸವಣ್ಣ ಮತ್ತು ಬಿಜ್ಜಳರ ಸಂಘರ್ಷದ ತಾತ್ವಿಕ ನೆಲೆಯಲ್ಲಿ ಕಟ್ಟಿಕೊಡುತ್ತದೆ. ಶರಣ ಚಳುವಳಿಯು ದಲಿತರ ಹಾಗೂ ಇನ್ನಿತರ ಕೆಳ ವರ್ಗದವರ ಬದುಕಿನಲ್ಲಿ ಹೇಗೆ ಸ್ಥಿತ್ಯಂತರಗಳಿಗೆ ಕಾರಣವಾಗಿದೆ. ಶರಣ ಚಳುವಳಿಯ ಯಾವ ಮೌಲ್ಯಗಳು ಕೆಳವರ್ಗದವರ ಬದುಕಲ್ಲಿ ಪ್ರವೇಶಿಸಿದವು ಎಂಬ ಅಂಶಗಳ ಮೇಲೆ ಈ ನಾಟಕ ಬೆಳಕು ಚೆಲ್ಲುತ್ತದೆ. ಬಿಜ್ಜಳನ ಪ್ರಭುತ್ವಕ್ಕಿಂತ ಬಸವಣ್ಣನ ವಿಚಾರಧಾರೆಗಳು ದಲಿತರ ಮೇಲೆ ಆಳವಾಗಿ ಪ್ರಭಾವಿಸಿರುವ

ಸಂಗತಿಗಳನ್ನು ಈ ನಾಟಕ ಮಾರ್ಮಿಕವಾಗಿ ಬಿತ್ತರಿಸುತ್ತದೆ. ಜಡಭರತರ ನಾನೇ ಬಿಜ್ಜಳ ನಾಟಕವು ಭ್ರಮೆ ಮತ್ತು ವಾಸ್ತವ, ಅಸ್ವಸ್ಥತೆ ಮತ್ತು ಚಿತ್ತಸ್ವಾಸ್ಥ್ಯ , ಅರಸೊತ್ತಿಗೆ ಮತ್ತು ಸಾಮಾನ್ಯತೆ ಹೀಗೆ ಹಲವು ದ್ವಂದ್ವಗಳ ನಡುವೆ ತೊಳಲಾಡುವ ಮನುಷ್ಯನ ಅಸ್ತಿತ್ವದ ಬಿಕ್ಕಟ್ಟುಗಳ ದೃಶ್ಯೀಕರಣವಾಗಿದೆ. ಇಲ್ಲಿ ಅಂತರಂಗ ಮತ್ತು ಬಹಿರಂಗದ ನೆಲೆಗಳಲ್ಲಿ ಮನುಷ್ಯ ಹೇಗೆ ಅಸ್ಥಿರ ಬದುಕಿಗೆ ಸಿಲುಕುತ್ತಾನೆ ಆ ಮೂಲಕ ಅಸ್ವಸ್ಥತೆಗೆ ಗುರಿಯಾಗುತ್ತಾನೆ ಎಂಬುದನ್ನು ನಾಟಕವು ಚಿತ್ರಿಸುತ್ತದೆ.

ಹೀಗೆ ಇಂತಹ ನಾಟಕಗಳಂತೆ ಇನ್ನು ಕೆಲವು ನಾಟಕಗಳು, ವಚನ ಚಳುವಳಿಯು ಹೇಗೆ ಕಾಲಾತೀತವಾಗಿ ಬೆಳೆದು, ಸಮಕಾಲೀನ ಜನರ ತಮ್ಮ ಭಿತ್ತಿಗಳಲ್ಲಿ ನೆಲೆಸಿ, ಸಾಮಾಜಿಕ ಬದಲಾವಣೆಯನ್ನು ಬಯಸುತ್ತದೆ ಎಂಬುದನ್ನು ಸಾಬೀತು ಮಾಡುತ್ತವೆ. ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಮುಂದಿನ ಹಲವು ನಾಟಕಕಾರರು ಶರಣ ಕ್ರಾಂತಿಗೆ ತಮ್ಮನ್ನು ಮುಖಾಮುಖಿಯಾಗಿಸಿಕೊಂಡು ಸತ್ಯಗಳನ್ನು ಶೋಧಿಸಿ, ಮತ್ತೆ ಮತ್ತೆ ವರ್ತಮಾನಗೊಳಿಸುವ ನಿಟ್ಟಿನೊಳಗೆ ನಾಟಕಗಳನ್ನು ಬರೆಯುತ್ತಲೇ ಇದ್ದಾರೆ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ಜಂಗಮದೆಡೆಗೆ, ಶ್ರೀ ವ್ಯಾಸ ದೇಶಪಾಂಡೆ ಅವರ ಇವನಮ್ಮವ, ತರಳಬಾಳು ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಗಳ ಮರಣವೇ ಮಹಾನವಮಿ, ಡಾ. ನಟರಾಜ್ ಬೂದಾಳ ಅವರ ಕಲ್ಯಾಣದ ಬಾಗಿಲು, ಡಾ. ವಿಕ್ರಂ ವಿಸಾಜಿ ಅವರ ಕಲ್ಯಾಣಪುರ, ಇನ್ನು ಮುಂತಾದ ಹಲವು ನಾಟಕಗಳು 12ನೇ ಶತಮಾನದ ವಚನ ಚಳುವಳಿಯನ್ನು ಭಿನ್ನ ನೆಲೆಗಳಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡುತ್ತಿವೆ.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಜಂಗಮದೆಡೆಗೆ ನಾಟಕವು 19 ದೃಶ್ಯಗಳಲ್ಲಿ ಬಸವಣ್ಣನ ಬಾಲ್ಯದಿಂದ ಪ್ರಾರಂಭವಾಗಿ, ಸಂಗಮನಾಥನಲ್ಲಿ ಲೀನವಾಗುವಲ್ಲಿಗೆ ಮುಕ್ತಾಯವಾಗುತ್ತದೆ. ಇಲ್ಲಿ ನಾಟಕಕಾರರು ಬಸವಣ್ಣನ ವೈಯಕ್ತಿಕ ಬದುಕನ್ನು ಸಮಷ್ಟಿಯಲ್ಲಿಟ್ಟು ಬೆಳಗಿಸಿ, ಸ್ಥಾವರಗೊಂಡಿದ್ದ ಸಮುದಾಯದ ಜನರ ಮನಸ್ಸುಗಳಲ್ಲಿ ಚೇತನವನ್ನುಂಟು ಮಾಡುವ ಕಾರಣಕ್ಕಾಗಿ ಕಟ್ಟಿದ ಮಹಾಮನೆಯು, ಈಗದು ಸ್ಥಾವರವಾಗಿ ಉಳಿದಿಲ್ಲ, ಕೇವಲ ಸಂಘಟನಾತ್ಮಕ ನೆಲೆಯಾಗಿಯೂ ಉಳಿದಿಲ್ಲ. ಅದು ಜಂಗಮವಾಗಿ ಜನರ ಬಳಿಯಡೆಗೆ ಸಾಗಿದೆ. ಇಲ್ಲಿ ಬರುವ ಶರಣರ ಪಾತ್ರಗಳೆಲ್ಲ ವ್ಯಕ್ತಿ ನೆಲೆಯಲ್ಲಿ ನಿಂತು ಮಾತನಾಡದೆ, ಅವು ಸಮಷ್ಟಿಗೊಂಡು ಎಲ್ಲರ, ಎಲ್ಲ ಕಾಲದ ಜನರ ಆಂತರ್ಯದ ಅಳುಕು ಬೆಳಕುಗಳಾಗಿ ತೋರುತ್ತವೆ. ಈ ನಾಟಕವು ವಚನ ಕ್ರಾಂತಿಯ ಮತ್ತೊಂದು ಮಗ್ಗುಲಿನ ಕಡೆಗೆ ಬೆಳಕು ಚೆಲ್ಲಿರುವುದು ಕಂಡುಬರುತ್ತದೆ.

ಶ್ರೀ ವ್ಯಾಸ ದೇಶಪಾಂಡೆಯವರ ಇವನಮ್ಮವ ನಾಟಕವು, ಕನ್ನಮಾರಿ ಎನ್ನುವ

ಕಳ್ಳನೊಬ್ಬನು ಬಸವಣ್ಣನ ಮನೆಯಲ್ಲಿ ಕಳ್ಳತನ ಮಾಡಲು ಯತ್ನಿಸಿ ಸಿಕ್ಕಿಬಿದ್ದು, ಆ ಬಳಿಕ ಪರಿವರ್ತನೆಗೊಂಡು ಶರಣನಾದವನ ಕಥೆಯನ್ನು ಆಧರಿಸಿದೆ. ನಾಟಕಕಾರರು ಈ ಚಿಕ್ಕ ಕತೆಯನ್ನೇ ಮೂಲವಾಗಿಸಿಕೊಂಡು ಸಮಕಾಲೀನ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳಿಗೆ ಮುಖಾಮುಖಿಯಾಗಿಸಿ ನೋಡುವ ಪ್ರಯತ್ನವು ಇಲ್ಲಿ ಕಂಡುಬರುತ್ತದೆ. ಇದರ ಜೊತೆಗೆ ಕಲ್ಯಾಣದಲ್ಲಿನ ವರ್ಗ ತಾರತಮ್ಯತೆ, ಬಸವಣ್ಣ ಕಳ್ಳನನ್ನು ಶರಣನನ್ನಾಗಿ ಪರಿವರ್ತಿಸಿದ ಪರಿಯ ಜೊತೆಗೆ ಸಮಾಜದ ವ್ಯವಸ್ಥೆಯಲ್ಲಿ ದುಡಿವ ವರ್ಗದ ಶೋಷಣೆ, ಪ್ರಭುತ್ವದ ರಾಜಕೀಯ ಚಿತ್ರಣ ಇತ್ಯಾದಿ ವಿಷಯಗಳನ್ನು ಪ್ರಾಸಂಗಿಕವಾಗಿ ನಾಟಕದಲ್ಲಿ ಕಟ್ಟಿಕೊಡಲಾಗಿದೆ.

ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಮರಣವೇ ಮಹಾನವಮಿ ಎನ್ನುವ ನಾಟಕದಲ್ಲಿ ಅಂತರ್ಜಾತಿ ವಿವಾಹವನ್ನು ಮುಖ್ಯ ವಸ್ತುವಾಗಿಸಿಕೊಂಡು ಬರೆದಿದ್ದಾರೆ. ಈ ನಾಟಕದಲ್ಲಿ ಬಸವಣ್ಣ, ಹರಳಯ್ಯ ಮತ್ತು ಮಧುವರಸರ ಪಾತ್ರಗಳ ಸುತ್ತ ಹೆಣೆದ ಕಥಾಹಂದರದಲ್ಲಿ ಜಾತಿಯ ಕಾರಣಕ್ಕಾಗಿ ನಡೆಯುವ ಹಲ್ಲೆ, ಕೊಲೆಸುಲಿಗೆಗಳನ್ನು ನಡೆಸುವ ಜನರಲ್ಲಿ, ತಮ್ಮ ಜಾತಿಯ ಕಾರಣಕ್ಕಾಗಿ ತಾಳಿದ ವಿಕಾರ ಮನೋಭಾವನೆಯನ್ನು ದೂರ ಮಾಡುವ ವಿಚಾರಕ್ಕೆ ವಚನ ಚಳುವಳಿ ಹೇಗೆ ಕಾರಣವಾಗಿದೆ ಎನ್ನುವುದನ್ನು ಈ ನಾಟಕ ಧ್ವನಿಸುತ್ತದೆ.

ನಟರಾಜ್ ಬೂದಾಳ್ ಅವರ ಕಲ್ಯಾಣದ ಬಾಗಿಲು, ಎಂಬ ನಾಟಕವು ಕಲ್ಯಾಣವೆಂಬುದು ಕೇವಲ ಚರಿತ್ರೆಯಲ್ಲಿ ಅಷ್ಟೇ ಅದು ಉಳಿದಿಲ್ಲ, ಮಾನವನ ಅನಂತ ಜೀವನಕ್ಕೆ ತೆರೆದ ಬಾಗಿಲು ಇದ್ದಂತೆ. ಈ ನೆಲದಲ್ಲಿ ಆಗಾಗ ಎದುರಾಗುವ ಸಾಮಾಜಿಕ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಬಗೆಹರಿಸಲು ನೆಲೆಯೂರಿ ಬಂದ ಬೌದ್ಧ, ಜೈನ, ನಾಥ, ಸಿದ್ಧ ಸೂಫಿಯರ ವಿಚಾರಧಾರೆಗಳಿಂದ ಜನರ ಜೀವಶಕ್ತಿಗೆ ಮೌಲ್ಯಗಳನ್ನು ಕೊಟ್ಟಿದ್ದಾರೆ. ಕಲ್ಯಾಣವು ಕೂಡ ಸಮಸಮಾಜದ ಕನಸನ್ನು ಹೊತ್ತುಕೊಂಡು ಸಮಾಜದಲ್ಲಿನ ಜಾತೀಯತೆ, ಲಿಂಗ ತಾರತಮ್ಯ, ಕಾಯಕದ ಮಹತ್ವ ಹಾಗೂ ಸತ್ಯ, ಅಹಿಂಸೆ, ನಿಷ್ಠೆಯ ಮಹತ್ತನ್ನು ಲೋಕಕ್ಕೆ ಸಾರಿದ ತಾತ್ವಿಕ ನಡೆಯ ದರ್ಶನವನ್ನು ಈ ನಾಟಕ ನೀಡುತ್ತದೆ.

ಡಾ. ವಿಕ್ರಮ್ ವಿಸಾಜಿಯವರು ಇತ್ತೀಚಿಗೆ ಬರೆದ ನಾಟಕ ಕಲ್ಯಾಣಪುರವು 9 ದೃಶ್ಯಗಳಲ್ಲಿ ಕಲ್ಯಾಣ ಕ್ರಾಂತಿಯ ಬೇರೊಂದು ನೆಲೆಯನ್ನು ತೆರೆದು ತೋರಿಸುತ್ತದೆ. ಕಲ್ಯಾಣ ಕ್ರಾಂತಿಯು ಬಸವಣ್ಣನ ಅರಸೊತ್ತಿಗೆ, ಅಂತರ್ಜಾತಿ ವಿವಾಹ, ಬಸವ ತತ್ವ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಕೇಂದ್ರವಾಗಿಸಿ ನಾಟಕ ರಚನೆಗೊಂಡಿದೆ. ಅಲ್ಲದೆ ಬಸವಣ್ಣನ ಆಂತರ್ಯದ ತಲ್ಲಣಗಳನ್ನು ಹಿಡಿದಿಡುವ ಪ್ರಯತ್ನವನ್ನು ಮಾಡುತ್ತದೆ. ಕಲ್ಯಾಣವು ಹೊತ್ತಿ ಉರಿಯುತ್ತಿರುವಾಗ ಅದೇ ಸಂದರ್ಭದಲ್ಲಿ ಬಾಳ ಸಂಗಯ್ಯನ

ಸಾವು, ಹರಳಯ್ಯ ಮಧುವರಸರ ಕೊಲೆ, ಶರಣರ ಬಂಧನ, ಶರಣರು ಆತ್ಮಹತ್ಯೆ ಜೊತೆಗೆ ತಮ್ಮ ಆತ್ಮರಕ್ಷಣೆಗಾಗಿ ಶರಣರು ಕಲ್ಯಾಣ ತೊರೆಯುವ ದೃಶ್ಯಗಳು ಬಸವಣ್ಣನನ್ನು ಕುಗ್ಗಿಸುತ್ತವೆ. ಬಸವಣ್ಣನ ಮನಸ್ಸನ್ನು ತಲ್ಲಣಗೊಳಿಸುತ್ತವೆ. ಈ ಪ್ರಕ್ಷುಬ್ಧ ವಾತವರಣದಲ್ಲಿ ಅವನ ಅಂತರ್ಯದಲ್ಲಿ ಮತ್ತೆ ಕಲ್ಯಾಣದ ಕನಸು ಚಿಗುರೊಡೆಯುತ್ತದೆ. ಪ್ರತಿಕೂಲದ ಸನ್ನಿವೇಶಗಳು ಎದುರಾದಾಗಲೂ, ಎದುರಿಸಿದ ಎಲ್ಲ ಸಂಕಟಗಳಲ್ಲೂ ಬಸವಣ್ಣನ ಅಂತರಂಗ ಕಂಡುಕೊಳ್ಳುವ ಉತ್ತರವೆಂದರೆ, ಕಲ್ಯಾಣದ ಕನಸು ಮತ್ತೆ ಸ್ಥಾಯಿಯಾಗಿ ನಿಲ್ಲುವುದು. ಇದನ್ನು ಸೊಗಸಾಗಿ ಕಲ್ಯಾಣಪುರ ನಾಟಕದಲ್ಲಿ ಕಟ್ಟಿಕೊಡಲಾಗಿದೆ.

ಶರಣರನ್ನು ಕುರಿತಾಗಿ ಕನ್ನಡ ನಾಟಕ ಪರಂಪರೆಯು ನಿರಂತರವಾಗಿ ವಚನ ಚಳುವಳಿಯ ಮೂಲ ದ್ರವ್ಯವನ್ನು ಶೋಧಿಸುವ ಮತ್ತು ಅಂದಿನ ಸಾಮಾಜಿಕ ಸ್ಥಿತಿಗಳ ಕುರಿತು ದೃಶ್ಯೀಕರಿಸುವಲ್ಲಿ ತನ್ನ ಸ್ವರೂಪ ಪಡೆದುಕೊಂಡಿರುವುದನ್ನು ಗುರುತಿಸಬಹುದು. ಅಲ್ಲದೆ ಹನ್ನೆರಡನೆ ಶತಮಾನದಲ್ಲಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಉಂಟಾದ ಸಂಘರ್ಷಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅವುಗಳಿಗೆ ವರ್ತಮಾನದ ಸ್ಪಂದನೆಗಳೇನು ಎಂಬ ಸೂಕ್ಷ್ಮ ಎಳೆಗಳ ಅಂಶಗಳನ್ನು ಕೂಡ ಚರ್ಚಿಸಿರುವುದು ಕಂಡುಬರುತ್ತದೆ. ಅವಜ್ಞೆಗೆ ಒಳಗಾದ ಸಮುದಾಯಗಳಿಗೂ ಆತ್ಮಗೌರವ ತಂದುಕೊಡುವಲ್ಲಿ ವಚನ ಕ್ರಾಂತಿಯ ಪಾತ್ರ ಚರಿತ್ರೆಯಲ್ಲಿ ಮಹತ್ವದ್ದು ಇದನ್ನು ನಾಟಕಕಾರರು ಮತ್ತೆ ಮತ್ತೆ ಸಾಬೀತು ಮಾಡಿ ಸಮಕಾಲೀನಗೊಳಿಸಲು ಪ್ರಯತ್ನಿಸಿದ್ದಾರೆ. ಬಸವಾದಿ ಶರಣರ ಚಿಂತನೆಗಳು ಸರ್ವಕಾಲಿಕ ಸತ್ಯಗಳಾಗಿರುವ ಸಂಗತಿಯನ್ನು ಮನಗಂಡು ಇಲ್ಲಿನ ಅನೇಕ ನಾಟಕಕಾರರು ಶರಣರ ಬದುಕನ್ನು ಕಟ್ಟಿಕೊಟ್ಟಿದ್ದಾರೆ ಆ ಕಾರಣಕ್ಕಾಗಿ ವಚನ ಕ್ರಾಂತಿ ಮತ್ತೆ ಮತ್ತೆ ನಾಟಕ ಸಾಹಿತ್ಯವಾಗಿ ವರ್ತಮಾನಗೊಳ್ಳುತ್ತಲೇ ಇದೆ.

**ಪರಾಮರ್ಶನ ಗ್ರಂಥಗಳು:**


1. ಕೃಷ್ಣಕುಮಾರ್ ಪಿ.ಸಿ., (1998), ಸಾಹಿತ್ಯ ಪ್ರವೇಶ, ಚೇತನ ಬುಕ್ ಹೌಸ್, ಮೈಸೂರು.
2. ಕೀರ್ತಿನಾಥ ಕುರ್ತಕೋಟಿ, (1991), ಯುಗದರ್ಮ ಹಾಗೂ ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ, ಧಾರವಾಡ.
3. ಗಿರಡ್ಡಿ ಗೋವಿಂದರಾಜು, (1998), ನಾಟಕ ಸಾಹಿತ್ಯ ಮತ್ತು ರಂಗಭೂಮಿ, ಅಕ್ಷರ ಪ್ರಕಾಶನ, ಸಾಗರ.
4. ನಾಗಭೂಷಣ ಎ.ಆರ್., (1993), ನಾಟಕ ಪ್ರವೇಶಿಕೆ, ಅಕ್ಷರ ಪ್ರಕಾಶನ, ಸಾಗರ.
5. ಮರುಳಸಿದ್ಧಪ್ಪ ಕೆ., (1993), ಆಧುನಿಕ ಕನ್ನಡ ನಾಟಕ, ಲಿಪಿ ಪ್ರಕಾಶನ, ಬೆಂಗಳೂರು.
6. ತಿಪ್ಪೆರುದ್ರಸ್ವಾಮಿ ಹೆಚ್., (1987), ವಚನ ಚಳುವಳಿ, ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯ, ಗುಲಬರ್ಗಾ.
7. ಜಯಶ್ರೀ ದಂಡೆ (ಸಂ.), ವೀರಣ್ಣ ದಂಡೆ, (2012), ಶರಣರ ಹಳೆಯ ನಾಟಕಗಳು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿ.ವಿ., ಗುಲಬರ್ಗಾ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.